ಶ್ರೀ ಬಿ. ಎಸ್. ಶಂಕರಪ್ಪ.—ಈ ವರ್ಷ ಎಸ್ಟಿಮೇಟ್‌ನಂತೆ ಕಲಸ ಮಾಡಲಾಗುತ್ತದೆಯೇ?

ಶ್ರೀ ಆರ್. ಚೆನ್ನಿಗರಾಮಯ್ಯ.—ಈಗಾಗಲೇ 1,510 ರೂಪಾಯಿಗಳು ಖರ್ಚಾಗಿವೆ. ಇದನ್ನು ಮುಂದುವರಿಸಿ ಪೂರಾ ಮಾಡಲಾಗುತ್ತದೆ.

Jodi Villages for Government Management.

Q.—388. Sri G. N. PUTTANNA (Tumkur).—

Will the Government be pleased to state:—

(*a*) whether they are insisting upon the jodidars in the State to furnish accounts Nos. 14 and 15 as per rule 6 of the Mysore Land Revenue Rules;

(*b*) whether they propose to take over the management of all the jodi villages immediately?

A.—Sri M. P. PATIL (Minister for Reveune).—

(*a*) Yes.

(*b*) This is not possible as inam villages can be taken over under Government management only if provisions of Land Revenue Code are satisfied. However in view of the promulgation of the Mysore Inam Abolition Acts even this question does not arise as these villages vest in Government as and when they are notified under these Acts.

ಶ್ರೀ ಜಿ. ಎಸ್. ಪುಟ್ಟಣ್ಣ.—ಸರ್ಕಾರದವರಿಗೆ ಜೋಡಿದಾರರು 14-15ನೆಯ ನಂಬರಿನಂತೆ ಲೆಕ್ಕ ಕೊಡಬೇಕೆಂದು insist ಮಾಡುತ್ತಿದ್ದೇವೆಂದು ಹೇಳಿದ್ದೀರಿ. ಆ ರೀತಿ ಕೊಟ್ಟಿಲ್ಲ ಎಂಬುದು ತಮಗೆ ಗೊತ್ತಿದೆಯೇ?

Sri M. P. PATIL.—In some cases they had not given the accounts. In those cases a special staff was appointed and the accounts were got written by them and expenses incurred in that connection were recovered from the jodidars.

ಶ್ರೀ ಜಿ. ಎಸ್. ಪುಟ್ಟಣ್ಣ.—ಈ ಲೆಕ್ಕ ಬರೆಯುತ್ತಿರುವುದು ಎಷ್ಟು ವರ್ಷದಿಂದೀಚೆಗೆ? ಈ ವರ್ಷಕ್ಕೇ? ಹಿಂದಿನ ವರ್ಷಕ್ಕೇ?

ಶ್ರೀ ಎಂ. ಪಿ. ಪಾಟೀಲ್.—ಆ ಸಮಾಚಾರ ನನ್ನಹತ್ತಿರ ಇಲ್ಲ.

ಶ್ರೀ ಜಿ. ಎಸ್. ಪುಟ್ಟಣ್ಣ.—ಆ ರೀತಿ ಜೋಡಿದಾರರು ಲೆಕ್ಕ ಕೊಡದೆ ಇದ್ದು, ಇನ್ನಾಂದಾರರು ಬೇರೆ ಬೇರೆ ರೈತರ ಹೆಸರನ್ನು ಬರೆಯುತ್ತಿದ್ದಾರೆಂದು ಗೊತ್ತಿದೆಯೇ. ನರಿಯಾಗಿ ಲೆಕ್ಕ ಕೊಡದೆ ಇದ್ದರೆ ಏನು ಮಾಡುತ್ತೀರಿ?

ಶ್ರೀ ಎಂ. ಪಿ. ಪಾಟೀಲ್.—ಲೆಕ್ಕಗಳ ಬಗ್ಗೆ ಹೇಳಿದ್ದೇನೆ. ರೂಲ್ ಪ್ರಕಾರ ಲೆಕ್ಕ ಕೊಡಬೇಕೆಂದಿದೆ. ಆ ರೀತಿ ಕೊಡದೆ ಇದ್ದರೆ ಸ್ಪೆಷಲ್ ಸ್ಟಾಫ್ ನೇಮಿಸಿ ಅವರಿಂದ ಲೆಕ್ಕ ಬರೆಸಿಕೊಳ್ಳುತ್ತಾರೆ. ಜೋಡಿದಾರರ ಮತ್ತು ರೈತರುಗಳ ಹಕ್ಕು ಏನಿದೆಯೋ ಅದನ್ನು ವಿಚಾರ ಮಾಡುತ್ತಾರೆ.

ಶ್ರೀ ಜಿ. ಎಸ್. ಪುಟ್ಟಣ್ಣ.—ಲೆಕ್ಕ ಬರೆಯುವ ಕಾಲದಲ್ಲಿ, ಸ್ಪೆಷಲ್ ಸ್ಟಾಫ್‌ನವರು 14-15ನೆಯ ದಾಖಲೆಯಮೇರೆ ರೈತರ ಹಕ್ಕನ್ನು ಬರೆಯದೆ ತಿರಸ್ಕರಿಸುವುದು ತಮಗೆ ಗೊತ್ತಿದೆಯೇ?

ಶ್ರೀ ಎಂ. ಪಿ. ಪಾಟೀಲ್.—ಇಲ್ಲ.

ಶ್ರೀ ಜಿ. ಎಸ್. ಪುಟ್ಟಣ್ಣ.—ಜೋಡಿದಾರರುಗಳು ರೈತರ ಹೆಸರನ್ನು ಬರೆಯುವುದನ್ನು ಬಿಟ್ಟರೆ ರೈತರಿಗೆ ಯಾವುದಾದರೂ ರೀತಿಯಲ್ಲಿ Relief ಕೊಡುವುದಕ್ಕೆ ಅಥವಾ ಬರೆದಿರುವ ಲೆಖ್ಖ ತಪ್ಪೆಂದು ತಿಳಿಸುವುದಕ್ಕೆ ಏನಾದರೂ ಏರ್ಪಾಡು ಮಾಡಿದ್ದೀರಾ?

ಶ್ರೀ ಎಂ. ಪಿ. ಪಾಟೀಲ್.—ಕಾನೂನು ಪ್ರಕಾರ ಯಾವರೀತಿ ಲೆಕ್ಕ ಬರೆಯ ಬೇಕೋ ಆರೀತಿ ಬರೆಯದೆ ಇದ್ದರೆ ಅಂಥ ಸಂದರ್ಭಗಳನ್ನು ನಮ್ಮ ಗಮನಕ್ಕೆ ತಂದರೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜಿ. ಎಸ್. ಪುಟ್ಟಣ್ಣ.—ರೈತರ ತಿಳಿವಳಿಕೆಯ ಬಗ್ಗೆ 14-15ನೆಯ ನಂಬರ್ ಲೆಕ್ಕವನ್ನು ಕಚೇರಿಯಲ್ಲಾಗಲೀ, ಜೋಡಿಗ್ರಾಮದಲ್ಲಾಗಲಿ ಪ್ರಕಟಣೆ ಮಾಡುತ್ತೀರಾ?

ಶ್ರೀ ಎಂ. ಪಿ. ಪಾಟೀಲ್.—ಅದಕ್ಕೆ ಅವಶ್ಯಕತೆ ಇಲ್ಲ. ಯಾರಿಗಾದರೂ ನೋಡುವುದರ ಅವಶ್ಯಕತೆಯಿದ್ದರೆ, ಅವರಿಗೆ ನೋಡುವುದಕ್ಕೆ ಅವಕಾಶ ಕೊಡುತ್ತೇವೆ.

ಶ್ರೀ ಜಿ. ಎಸ್. ಪುಟ್ಟಣ್ಣ.—ಈ ಲೆಕ್ಕಗಳು ಯಾರ ಹತ್ತಿರ ಇವೆಯೆಂಬುದೇ ಗೊತ್ತಾಗುವುದಿಲ್ಲ. ರೈತರಿಗೆ ಇದನ್ನು ತಿಳಿದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಎಂ. ಪಿ. ಪಾಟೀಲ್.—ಸಂಬಂಧಪಟ್ಟವರಿಗೆ ನೋಟೀಸ್ ಕೊಡುತ್ತೇವೆ.

ಶ್ರೀ ಎ. ಮುನಿಯಪ್ಪ.—ಜೋಡಿದಾರರು ಯಾರ ಸಲಹೆಯಮೇರೆಗೆ ಲೆಕ್ಕ ಬರೆಯತ್ತಾರೆ?

ಶ್ರೀ ಎಂ. ಪಿ. ಪಾಟೀಲ್.—ಅದು ನನಗೇ ಗೊತ್ತಿಲ್ಲ ಆದರೆ ನಮ್ಮ ಸ್ಟಾಫ್ ಬರೆಯ ಬೇಕಾದರೆ ಯಾವ ಯಾವ ಮೂಲದಿಂದ ಸಮಾಚಾರ ತರಿಸಿಕೊಳ್ಳ ಬೇಕೋ ಅದನ್ನು ತರಿಸಿಕೊಂಡು ಬರೆಯುತ್ತಾರೆ.

ಶ್ರೀ ಎ. ಮುನಿಯಪ್ಪ.—ಗೊತ್ತಿಲ್ಲ ಎಂದು ಹೇಳಿದಿರಿ. ಯಾರ ಸಲಹೆಯನ್ನಾದರೂ ಕೇಳಿ ಬರೆಯ ಬೇಕೆಂದು ಸೂಚನೆ ಕೊಟ್ಟಿಲ್ಲವೇ?

ಶ್ರೀ ಎಂ. ಪಿ. ಪಾಟೀಲ್.—ಲೆಕ್ಕ ಬರೆದು ಕೊಡಬೇಕು; ಅಷ್ಟೇ ಇರುವುದು ರೂಲ್ಸ್‌ನಲ್ಲಿ.

ಶ್ರೀ ಎ. ಮುನಿಯಪ್ಪ.—ಪಟೇಲ್ ಶ್ಯಾನುಭೋಗರುಗಳು ತಮಗೆ ಬೇಕಾಗಿರದ ರೈತರುಗಳ ಹೆಸರುಗಳನ್ನು ಬಿಟ್ಟು ಬೇರೆಯವರ ಹೆಸರನ್ನು ಬರೆಯುತ್ತಿರುವುದು ಗೊತ್ತಿದೆಯೇ?

ಅಧ್ಯಕ್ಷರು.—ಆ ಪ್ರಶ್ನೆ ಈ ಸಂದರ್ಭದಲ್ಲಿ ಬರುವುದಿಲ್ಲ.

ಶ್ರೀ ಬಿ. ಇ. ರಾಮಯ್ಯ.—ಜೋಡಿದಾರರುಗಳು ರೈತರ ಹಕ್ಕನ್ನು ತಪ್ಪಿಸಿ ತಾವೇ ಮಾಡುತ್ತಿರುವುದಾಗಿ

ಲೆಕ್ಕ ಬರೆಯುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

Sri M. P. PATIL.—All the cases brought to the notice of the Government have been examined and enquiries have been made and decisions are taken by the officers.

ಶ್ರೀ ಬಿ. ಇ. ರಾಮಯ್ಯ.—ಹಾಗೇನಾದರೂ ಮಾಡಿದಾಗ ಸ್ಥಳಕ್ಕೆ ಹೋಗಿ ವಿಚಾರ ಮಾಡುವುದಕ್ಕೆ ತಕ್ಕ ಸೂಚನೆ ಕೊಟ್ಟಿದ್ದೀರಾ ?

ಶ್ರೀ ಎಂ. ಪಿ. ಪಾಟೀಲ್.—ಸಂಬಂಧಪಟ್ಟ ಅಮಲ್ದಾರರು ಸ್ಥಳಕ್ಕೆ ಹೋಗಿ ವಿಚಾರಮಾಡುತ್ತಾರೆ.

ಶ್ರೀ ಕೆ. ಎಚ್. ವೆಂಕಟರೆಡ್ಡಿ.—ಜೋಡಿದಾರರುಗಳು ಕೊಡುವ ಲೆಕ್ಕವನ್ನು ತಾವು ಒಪ್ಪುತ್ತೀರಾ ?

ಶ್ರೀ ಎಂ. ಪಿ. ಪಾಟೀಲ್.—ಒಪ್ಪುವ ಪ್ರಶ್ನೆಯೇ ಬರುವುದಿಲ್ಲ. ವಿಚಾರಣೆ ನಡೆಸುವಾಗ ಪಾರ್ಟಿಗಳು ಏನು ಹೇಳುತ್ತಾರೆ, ಜೋಡಿದಾರರು ಏನು ಹೇಳುತ್ತಾರೆ ನೋಡಿಕೊಂಡು ಅಮಲ್ದಾರರು ತೀರ್ಮಾನ ಮಾಡುತ್ತಾರೆ.

ಶ್ರೀ ಜಿ. ಎಸ್. ಪುಟ್ಟಣ್ಣ.—ಜೋಡಿದಾರರುಗಳು ರೈತರಿಗೆ ಹಿಂದಿನಿಂದ ರಸೀತಿ ಕೊಟ್ಟುಕೊಂಡು ಬಂದು ಈಗ 14-15ನೆಯ ನಂಬರಿನಲ್ಲಿ ತಪ್ಪು ಬರೆದು ತಮ್ಮ ಹೆಸರನ್ನು ಬರೆದು ಕೊಂಡಿದ್ದಾರೆಂಬುದು ತಮ್ಮ ನೋಟೀಸಿಗೆ ಬಂದಿದೆಯೇ ?

ಶ್ರೀ ಎಂ. ಪಿ. ಪಾಟೀಲ್.—ನಮ್ಮ ನೋಟೀಸಿಗೆ ಬಂದಿಲ್ಲ. ಯಾವ ಯಾವ ಸಂದರ್ಭದಲ್ಲಿ ಅಂಥದು ನೋಟಿಸಿಗೆ ಬರುತ್ತದೋ ಆಗ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜಿ. ಎನ್. ಪುಟ್ಟಣ್ಣ.—ಅಂಥವರಿಗೆ ಏನು ಶಿಕ್ಷೆ ವಿಧಿಸಬೇಕೆಂದು ತಮ್ಮ Special Officerಗೆ ಸೂಚನೆ ಕೊಟ್ಟಿದ್ದೀರಿ ?

Sri M. P. PATIL.—It is a hypothetical question. If such cases are brought to the notice of the Government, they will be examined and if the officers are found to be at fault, action will be taken against them.

ಶ್ರೀ ಜಿ. ಎಸ್. ಪುಟ್ಟಣ್ಣ.—ನೀವು ನೇಮಿಸಿರುವ ಸ್ಪೆಷಲ್ ಸ್ಟಾಫಿನವರು ಇಂಥದ್ದನ್ನು ತಮ್ಮ ಗಮನಕ್ಕೆ ತಂದರೆ ಕ್ರಮ ತೆಗೆದು ಕೊಳ್ಳುತ್ತೇವೆಂದು ಹೇಳಿದಿರಿ. ತರದೆ ಇದ್ದರೆ ಏನುಮಾಡುತ್ತೀರಿ ? ಆಗ ರೈತರ ಗತಿಯೇನು ?

ಶ್ರೀ ಎಂ. ಪಿ. ಪಾಟೀಲ್.—ಅಂಥ ಸಂದರ್ಭಗಳನ್ನು ನಮ್ಮ ಗಮನಕ್ಕೆ ತಂದರೆ, ನಾವು ಸ್ಪೆಷಲ್ ಸ್ಟಾಫ್ ನವರ ಬೇರೆ ಕ್ರಮ ಕೈಕೊಳ್ಳಬಹುದು.

ಶ್ರೀ ಜಿ. ಎಸ್. ಪುಟ್ಟಣ್ಣ.—ಸ್ಪೆಷಲ್ ಸ್ಟಾಫಿನವರು ಸರ್ಕಾರದವರ ನೋಟೀಸಿಗೆ ತಂದರೆ ಕ್ರಮ ತೆಗೆದು ಕೊಳ್ಳುತ್ತೇವೆಂದು ಹೇಳಿದ್ದೀರಿ. ತಮ್ಮ ನೋಟಿಸಿಗೆ ಸ್ಪೆಷಲ್ ಸ್ಟಾಫ್ ನವರು ತರಬೇಕೆಂದು ಸೂಚನೆ ಕೊಟ್ಟಿದ್ದೀರಾ ?

ಶ್ರೀ ಎಂ. ಪಿ. ಪಾಟೀಲ್.—ಆ ರೀತಿ ಏನೂ ಇಲ್ಲ.

ಶ್ರೀ ಜಿ. ಎಸ್. ಪುಟ್ಟಣ್ಣ.—ಜಾಗ್ರತೆ ಆ ರೀತಿ ಕೊಡಬೇಕೆಂದು ನನ್ನ ಪ್ರಾರ್ಥನೆ.

ಶ್ರೀ ಎ. ಮುನಿಯಪ್ಪ.—ಇಂಥ ಅನ್ಯಾಯ ಎಲ್ಲಿಯೂ ನಡೆದಿಲ್ಲ, ತಮ್ಮ ಗಮನಕ್ಕೆ ಬಂದಿಲ್ಲವೆಂದು ಹೇಳಿದಿರಿ. ಹಾಗಾದರೆ ಜೋಡಿದಾರರುಗಳು ಸತ್ಯವಾಗಿ ನಡೆಯುತ್ತಿದ್ದಾರೆಂದು ತಮ್ಮ ಭಾವನೆಯೇ ?

Mr. SPEAKER.—order, Order. . . .

ಶ್ರೀ ಎಚ್. ಕೆ. ಸಿದ್ದಯ್ಯ.—ಜೋಡಿದಾರರುಗಳು ರೈತರುಗಳ ಹಕ್ಕನ್ನು ತಪ್ಪಿಸಬೇಕೆಂದು ಹೇಳಿ ತಮ್ಮ ಅಣ್ಣ, ತಮ್ಮ, ಬಂದು ಬಳಗ, ಮೈನೂರಿನಲ್ಲಿರುವವರು, ಬೆಂಗಳೂರಿನಲ್ಲಿರುವವರು — ಎಲ್ಲೆಲ್ಲೋ ಇರುವವರ ಹೆಸರಿಗೂ ಜಮೀನನ್ನು ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

Sri M. P. PATIL.—It is a general question and I cannot reply to general questions. But I may assure that, whenever such cases are brought to the notice of the Government, steps will be taken to rectify them.

Extent of land sanctioned to Birur Viswakarma Hostel.

Q.—414. Sri D. H. RUDRAPPA (Kadur).—

Will the Government be pleased to state :—

(*a*) the extent of land sanctioned to the Birur Viswakarma Hostel authorities in Survey No. 4 under the Birur Amrit Mahal Kaval and the date of such sanction ;

(*b*) whether they are aware of the fact that in spite of their sanction, local authorities are refusing to execute their order ;

(*c*) whether they would arrange to make over that land to the above Hostel authorities in case their order has not been executed so far ?

A.—Sri M. P. PATIL (Minister for Revenue).—

(*a*) An extent of 25 acres of land was sanctioned on lease for a period of 10 years in G.O. No. R.6. 602-4/LR. 24-55-347, dated 23rd April 1956.

(*b*) A stay order had been issued by Government.

(*c*) The stay order has been vacated and directions issued to hand over possession to the Hostel authorities.

ಶ್ರೀ ಎಚ್. ಕೆ. ಸಿದ್ದಯ್ಯ.—ಅನೇಕ ಗ್ರಾಮಗಳಲ್ಲಿ ಈ ರೀತಿ ಆಗಿದೆ. ಲೆಕ್ಕ ತರಿಸಿಕೊಂಡು ಪರಿಶೀಲನೆ ಮಾಡುತ್ತೀರಾ ?

ಅಧ್ಯಕ್ಷರು.—ಆಗಲೇ ಹೇಳಿದ್ದಾರೆ. ಅವರ ಅವ ಗಾಹನೆಗೆ ಬಂದರೆ ಮಾಡುತ್ತೇವೆಂದು ಹೇಳಿದ್ದಾರೆ. ತವ ಗೇನಾದರೂ ಅಂಥ ಸಂದರ್ಭಗಳು ಗೊತ್ತಿದ್ದರೆ ಅವರ ಅವಗಾಹನೆಗೆ ತರಬೇಕೆಂದು ಹೇಳುತ್ತಾರೆ.